ಭರವಸೆಗಳನ್ನು ಕಳೆದುಕೊಂಡಿದ್ದು, ಅಂತಿಮವಾಗಿ ಸೆಕೆಂಡ್ ಒಪೀನಿಯನ್‌ನಂತೆ ನಿಮ್ಮದೊಂದು ಮಾತು ಕೇಳಲು ಕಾತರರಾಗಿದ್ದಾರೆ ಎಂದರು.

ಹುಡುಗಿ ಎಂದಾಕ್ಷಣ ಏನೋ ಒಂಥರಾ ಕುತೂಹಲ. ಅರವತ್ತೈದು ವರ್ಷದ ಡಾ. ಮೈಥಿಲಿ ಎಂಬ ಗೈನೆಕಾಲಜಿಸ್ಟ್ ಹೆಂಡತಿಯಿದ್ದರೂ, ಡಾ. ಸುಕೃತಾ ಎಂಬ ರೇಡಿಯಾಲಜಿ ಓದಿರುವ ಮಗಳಿದ್ದರೂ ಯಾಕೋ ಒಂದು ರೀತಿಯ ಸಾಫ್ಟ್‌ಕಾರ್ನರ್ ಮೂಡಿತು. ಸುಕೋಮಲವಾಗಿರಬಹುದಾದ ಆ ಹುಡುಗಿಯನ್ನು ಉಳಿಸಿಕೊಟ್ಟರೆ ಅವಳ ಕುಟುಂಬ ಸಾಯುವವರೆಗೂ ತನಗೆ ಚಿರಋಣಿಯಾಗಿರುತ್ತದಲ್ಲ ಎಂಬ ಸ್ವಾರ್ಥವೂ ಹೆಡೆಯಾಡಿತು. ಉತ್ಸಾಹದಿಂದ ವ್ಹೀಲ್‌ಚೇರಲ್ಲಿ ಸಿಮ್ಹಾನ್ಸ್‌ಗೆ ತೆರಳಲು ಸಿದ್ಧರಾದರು.

ನಿಸ್ತೇಜವಾಗಿ ಮಲಗಿದ್ದ ಆ ಹೆಣ್ಣುಮಗುವನ್ನು ನೋಡಿ ಕರುಣಾರಸವೆಂಬುದು ಅವರ ಮನಸ್ಸಿನೊಳಗೆ ಧಾರಾಕಾರವಾಗಿ ಹರಿಯಿತು. ಎಲ್ಲ ರಿಪೋರ್ಟುಗಳನ್ನು ಪರಿಶೀಲಿಸಿದರು. ಅವರ ಪೋಷಕರನ್ನು ತಮ್ಮ ಛೇಂಬರ್‌ಗೆ ಕರೆಸಿಕೊಂಡರು. ತಮ್ಮ ಕಾಲು ಮುರಿಯಲು ಕಾರಣಳಾದ ಅವಳ ಬಗ್ಗೆ ಸಿಟ್ಟಿನಿಂದ ಏನೇನು ಬಯ್ಯುತ್ತಾರೋ ಎಂದು ಅಳುಕಳುಕುತ್ತಲೇ ಬಂದ ಅವರು ಕೂರಲೂ ಹಿಂಜರಿದು ನಿಂತೇ ಇದ್ದರು. ಇದ್ಯಾವುದೋ ತಲೆಯಲ್ಲಿರದ ಡಾ. ಚಿರಂಜೀವಿ ಆಕೆಯ ಮೆದುಳು ಪೂರ್ಣ ನಿಷ್ಕ್ರಿಯಗೊಂಡಿದ್ದು ಬದುಕುಳಿಯುವ ಸಾಧ್ಯತೆ ಇಲ್ಲವೇ ಇಲ್ಲ. ಹೆಚ್ಚೆಂದರೆ ಇನ್ನು ಮೂರು ದಿನ ಕೃತಕ ಉಸಿರಾಟದಿಂದ ಉಳಿಸಿಕೊಳ್ಳಬಹುದಷ್ಟೇ. ಆಕೆಯ ಮೆದುಳೊಂದು ಬಿಟ್ಟು ಉಳಿದೆಲ್ಲ ಅಂಗಗಳೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ಆಕೆಯ ಸಾವಿನ ನಂತರ ಇಡೀ ದೇಹವನ್ನು ಸುಟ್ಟು ಹಾಕುವ ಬದಲು ಆಕೆಯ ಅಂಗಾಂಗಗಳನ್ನು ದಾನ ಮಾಡಿ. ಉದಾಹರಣೆಗೆ ಆಕೆಯ ಕಣ್ಣು ಇನ್ನೊಬ್ಬರಿಗೆ ದೃಷ್ಟಿ ನೀಡುತ್ತದೆ; ಆಕೆಯ ಕಿಡ್ನಿ ಇನ್ನೊಬ್ಬರ ಜೀವ ಉಳಿಸುತ್ತದೆ; ಆಕೆಯ ಹೃದಯ ಇನ್ಯಾರೋ ಸಾಯಲಿರುವವರ ಪ್ರಾಣ ಉಳಿಸುತ್ತದೆ. ಲಿವರ್, ಪ್ಯಾಂಕ್ರಿಯಾಗಳು ಟ್ರಾನ್ಸ್‌ಪ್ಲಾಂಟೇಷನ್ ಮಾಡಲು ಸಾಧ್ಯವಾ ಎಂಬ ಹೊಸ ಸಂಶೋಧನೆಗೆ ವೈದ್ಯಕೀಯ ಕಾಲೇಜಿಗೆ ಬೇಕಾಗಬಹುದು. ಅಥವಾ ಒಂದೊಂದು ಅಂಗದ ಬದಲು ಇಡೀ ದೇಹವನ್ನೇ ಮೆಡಿಕಲ್ ಕಾಲೇಜಿಗೆ ದೇಹದಾನ ಮಾಡಿದರೂ ಆದೀತು. ಹೀಗೆ ಆಕೆ ಸತ್ತರೂ ಇನ್ಯಾರದೋ ಮೂಲಕ ಬದುಕಿರುತ್ತಾಳೆ ಎಂಬ ಭಾವಾವೇಶದ ಮಾತುಗಳನ್ನು ಆಡಿ ಅವರನ್ನೆಲ್ಲ ಒಪ್ಪಿಸಿದರು.

***

ರಾತ್ರಿ ಮಲಗಿದಾಗ ತನ್ನ ಕಣ್ಣ ಮುಂದೆಲ್ಲ ಆ ಹುಡುಗಿಯ ರೂಪವೇ ಗುನುಗುನಿಸುತ್ತಿತ್ತು. ತಾನು ಎಷ್ಟೆಲ್ಲ ರೋಗಿಗಳನ್ನು ನೋಡಿಲ್ಲ, ಆದರೂ ಎಂದೂ ಯಾವ ದೇಹದ ಬಗ್ಗೆಯೂ ಹೀಗೆ ವ್ಯಾಮೋಹ ಎಂಬುದು ಬಂದಿರಲಿಲ್ಲ; ಇವತ್ತು ಯಾಕೆ ಹೀಗಾಗುತ್ತಿದೆ ಎಂದುಕೊಳ್ಳುತ್ತಲೇ ನಿದ್ರೆಗೆ ಜಾರಿದ್ದರು.

ಮರುದಿನ ಬೆಳಗ್ಗೆ ನಿತ್ಯಕರ್ಮಕ್ಕೆಂದು ಕುಂಟುತ್ತ ಯೂರೋಪಿಯನ್ ಕಮೋಡ್ ಮೇಲೆ ಕುಂತಾಗ ಏನೇನೋ ಯೋಚನೆಗಳು. ಅವರಿಗೆ ಎರಡೇ ಸಂದರ್ಭಗಳಲ್ಲಿ ಹೊಸ ಹೊಸ ಆಲೋಚನೆಗಳು ಹೊಳೆಯುತ್ತಿದ್ದುದು. ಒಂದು ಧ್ಯಾನಕ್ಕೆ ಕುಳಿತಾಗ, ಇನ್ನೊಂದು ಟಾಯ್ಲೆಟ್‌ಲ್ಲಿ ಏಕಾಂತದಲ್ಲಿ ಕುಳಿತಾಗ. ತನ್ನ ಜರ್ಝರಿತವಾದ ಈ ದೇಹದ ಯಾವುದಾದರೂ ಭಾಗಕ್ಕೆ ಆ ಹುಡುಗಿಯ ಅಂಗಾಂಗ ಜೋಡಿಸಿಕೊಳ್ಳಬಹುದೇ ಎನ್ನಿಸಿತು. ಊನವಾಗಿರುವ ಕಾಲು, ಸ್ಟಂಟ್ ಹಾಕಿರುವ ಹೃದಯ ಇತ್ಯಾದಿ... ಹೀಗೆ ಒಂದೊಂದು ಅಂಗಾಂಗದ ಬದಲು ಇಡೀ ದೇಹವನ್ನೇ ಟ್ರಾನ್ಸ್‌ಪ್ಲಾಂಟ್ ಮಾಡಿದರೆ ಹೇಗೆ ಎಂಬ ಆಲೋಚನೆ ಬಂತು. ಅಂದರೆ ಬೇರೊಬ್ಬರ ಮೆದುಳನ್ನು ಈಕೆಯ ದೇಹಕ್ಕೆ ಟ್ರಾನ್ಸ್‌ಪ್ಲಾಂಟ್ ಮಾಡುವುದು. ಅಂದರೆ ಅದು ಬ್ರೈನ್ ಟ್ರಾನ್ಸ್‌ಪ್ಲಾಂಟ್ ಆಗುವುದಿಲ್ಲವೇ? ಹಾಗಾದರೆ ಆ ದೇಹ ಈಕೆಯದೋ, ಮೆದುಳಿನವರದೋ? ಎಲ್ಲ ಮನಸಿನ ವ್ಯಾಪಾರಗಳು, ಚಿಂತನೆಗಳೂ ಮೆದುಳಿಗೆ ಸಂಬಂಧಿಸಿದ್ದರಿಂದ ಈ ದೇಹ ಎಂಬುದು ನಿಮಿತ್ತ ಮಾತ್ರ. ಆದರೆ ನಾವು ವ್ಯಕ್ತಿಯನ್ನು ಗುರುತಿಸುವುದು ದೇಹ ಯಾರದ್ದೋ ಅವರಿಂದ ತಾನೇ? ಜನ್ಮಾಂತರದ ವಿಷಯ ಬಂದಾಗ ಆತ್ಮ ಎಂಬುದು ಒಂದು ದೇಹದ ಸಾವಿನ ನಂತರ ಹಾರಿಹೋಗಿ ಇನ್ನೊಂದು ಹೊಸ ಹುಟ್ಟಿನ ದೇಹ ಸೇರಿಕೊಳ್ಳುವುದಂತೆ. ಹಾಗಾದರೆ ಹಿಂದಿನ ಜನ್ಮದ ಜ್ಞಾನ ಯಾಕೆ ಮುಂದುವರೆಯದೇ ಹೊಸ ದೇಹ ಎಲ್ಲವನ್ನೂ ಕಲಿಯಬೇಕಿತ್ತು?

ಹೀಗೆ ಚಿಂತಿಸುತ್ತಿರುವಾಗಲೇ ಫಳಾರನೆ ಅವರಿಗೆ ಹೊಳೆದದ್ದು, ತನ್ನ ಮೆದುಳನ್ನೇ ಯಾಕೆ ಆಕೆಯ ದೇಹಕ್ಕೆ ಟ್ರಾನ್ಸ್‌ಪ್ಲಾಂಟ್ ಮಾಡಬಾರದು ಎಂಬುದು. ಒಂದು ಕ್ಷಣ ರೋಮಾಂಚಿತರಾದರು. ಹುರ್ರೇ ಎಂದು ಟಾಯ್ಲೆಟ್ಟನ್ನೂ ಫ್ಲೆಶ್ ಮಾಡದೇ ಎದ್ದು ಹೊರಗೆ ಓಡಿದರು. ಒಳಗೆ ಹೋಗುವಾಗ ಕುಂಟುತ್ತ ಹೋದ ದೇಹವೂ ಏನೋ ಆವೇಶ ಬಂದಂತೆ ಪುಳಕಿತವಾಗಿ ನೋವೆಂಬುದು ಹಾರಿಹೋಗಿತ್ತು.

ತಕ್ಷಣ ಸ್ನಾನಗೀನ ಏನೂ ಮಾಡದೆ ನೇರ ಸಿಮ್ಹಾನ್ಸ್‌ಗೆ ಹೋದರು. ಅಷ್ಟರಲ್ಲಿ ಅಲ್ಲಿಗೆ ಬರುವಂತೆ ಡೈರೆಕ್ಟರ್‌ಗೆ, ಎಲ್ಲ ಸ್ಪೆಶಲಿಸ್ಟ್‌ಗಳಿಗೆ ನಿರ್ದೇಶನ ನೀಡಿದರು. ಕೂಡಲೇ ತುರ್ತು ಸಭೆ ಸೇರಿಸಿ ವಿಷಯ ಮಂಡನೆ ಮಾಡಿದರು. ಯಾರದೋ ದೇಹಕ್ಕೆ ಪ್ರಯೋಗ ಮಾಡುವುದೆಂದರೆ ಯಾರೂ ತಲೆ ಕೆಡಿಸಿಕೊಳ್ಳದೇ ಒಪ್ಪಿಬಿಡುತ್ತಿದ್ದರೇನೋ? ಆದರೆ ಯಾವಾಗ ತಾವೇ ಪ್ರಯೋಗಪಶುವಾಗುತ್ತೇವೆಂದರೋ ಆಗ ಎಲ್ಲರೂ ಒಂದು ಕ್ಷಣ ಸ್ತಂಭೀಭೂತರಾದರು. ಆದರೂ ನಿಮ್ಮ ಮನೆಯವರ ಒಪ್ಪಿಗೆ, ಅವರ ಪೇರೆಂಟ್ಸ್ ಒಪ್ಪಿಗೆ ಎಲ್ಲ ಬೇಕಲ್ಲವೆ ಎಂದು ಅಡ್ಡಪಟ್ಟಿ ಇಟ್ಟರೂ, ಅವನ್ನೆಲ್ಲ ಕೇರು ಮಾಡುವ ಪ್ರವೃತ್ತಿಯವರಲ್ಲದ ಕಾರಣ ಕೂಡಲೇ ನಿರ್ಧಾರ ಪ್ರಕಟಿಸಿಬಿಟ್ಟರು.

ಆಕೆಯ ಪೋಷಕರನ್ನು ಕರೆದು, ‘ದೇಹ ನಿಮ್ಮ ಮಗಳದು ಎಂಬ ಭಾವ ನಿಮ್ಮದಾದರೂ, ಅದರ ನಿಯಂತ್ರಣ ಮೆದುಳಿನದಾಗಿರುವುದರಿಂದ ನೀವು ಯಾವುದೇ ಕ್ಲೇಮ್ ಮಾಡುವಂತಿಲ್ಲ’ ಎಂದರು. ಅಯ್ಯೋ, ಸತ್ತೇ ಹೋದಳೆಂದುಕೊಂಡಿದ್ದ ಮಗಳು ಬದುಕುತ್ತಾಳೆಂದಾದರೆ ದೂರದಿಂದಲೇ ನೋಡಿ ಸಂತೋಷಪಡುವುದಾಗಿ ಅವರೂ ಒಪ್ಪಿಕೊಂಡರು. ಇನ್ನು ಡಾ. ಚಿರಂಜೀವಿಯವರ ಮನೆಯವರೆಲ್ಲ ಡಾಕ್ಟರೇ ಆದುದರಿಂದ, ಅವರ ಜ್ಞಾನದ ಪ್ರಖರತೆಯ ವಿಸ್ತಾರಕ್ಕೆ ಇನ್ನೊಂದು ಜನ್ಮ ಸಿಕ್ಕಂಥ ಭಾವ ಅವರದಾಗಿತ್ತು. ಆದಾಗ್ಯೂ ಶಸ್ತ್ರಚಿಕಿತ್ಸೆ ವಿಫಲವಾಗಿ ಏನಾದರೂ ಹೆಚ್ಚುಕಡಿಮೆಯಾದಲ್ಲಿ ತಾವು ಜವಾಬ್ದಾರರಲ್ಲ ಎಂಬ ಒಪ್ಪಂದಕ್ಕೆ ಎಲ್ಲರ ಸಹಿ ಹಾಕಿಸಿಕೊಳ್ಳಲಾಯಿತು.

***



ಅತ್ಯಂತ ಸುದೀರ್ಘವೂ ಸಂಕೀರ್ಣವೂ ಆದ ಶಸ್ತ್ರಚಿಕಿತ್ಸೆಯ ನಂತರ, ಕಪ್ಪುಮುಖ ಬಿಳಿಕೂದಲಿನ ತಮ್ಮ ಮುದಿದೇಹವನ್ನು ಮೆಡಿಕಲ್ ಕಾಲೇಜಿನ ಪ್ರಯೋಗಾಲಯದ ಗುಜರಿಗೆ ಹಾಕಿ, ಹುಡುಗಿಯ ದೇಹದೊಳಗೆ ಪ್ರವೇಶಿಸಿದ ಡಾ. ಚಿರಂಜೀವಿ ಅನೇಕ ತುಮುಲಗಳನ್ನು ಅನುಭವಿಸಿದರು. ಉಬ್ಬಿದ ಎದೆ, ತುಂಬಿದ ನಿತಂಬ, ನೀಳ ಕೂದಲು ಇವುಗಳನ್ನೆಲ್ಲ ನಿರ್ವಹಿಸುವುದು ಕಷ್ಟ ಎನ್ನಿಸಲಾರಂಭಿಸಿತು. ಸೀರೆ ಉಡಲು ಬಾರದೇ ಶರ್ಟು–ಪ್ಯಾಂಟನ್ನೇ ಹಾಕಿಕೊಂಡು ಲೇಡೀಸ್ ಬ್ಯೂಟಿ ಪಾರ್ಲರ್‌ಗೆ ಹೋಗಿ ಜೆಂಟ್ಸ್ ಕಟಿಂಗ್ ಮಾಡಿಸಿಕೊಂಡರು. ಸದ್ಯ, ದಿನಾಲು ಶೇವಿಂಗ್ ಮಾಡುವ ಕಾಟ ತಪ್ಪಿತಲ್ಲ ಎಂದುಕೊಂಡರೂ, ತಲೆಕೆಟ್ಟಾಗ ಅಭ್ಯಾಸವಿದ್ದ ಸಿಗರೇಟು ಆಗಾಗ ಸೆಳೆಯುತ್ತಿತ್ತು. ಆದರೆ ತನ್ನ ಇಂಪಾದ ಧ್ವನಿಗೆ ಎಲ್ಲಿ ಧಕ್ಕೆಯಾದೀತೋ ಎಂದು ಹಿಂಜರಿಯುತ್ತಿದ್ದರು. ತನ್ನ ಸುಂದರವಾದ ಮುಖಾರವಿಂದಕ್ಕೆ ತಾವೇ